ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 436

ಮಾನ್ಯ ಸದಸ್ಯರ ಹೆಸರು : ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು)

ವಿಷಯ : ಐತಿಹಾಸಿಕ ಬೀದರ್ ಕೋಟೆಗಳ ನಿರ್ವಹಣೆ ಕುರಿತು

ಉತ್ತರಿಸುವ ದಿನಾಂಕ : 19.02.2018

ಉತ್ತರಿಸುವ ಸಚಿವರು : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು

ಕ್ರ. ಸ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಇತಿಹಾಸ ಬಿಂಬಿಸುವ ಐತಿಹಾಸಿಕ ನಾಲ್ಕು ಕೋಟೆಗಳನ್ನು ಮಾದರಿ ಪ್ರವಾಸಿ ತಾಣಗಳಾದ ರೂಪಿಸಲಾಗಿದೆಯೇ; ಇದನ್ನು ಯಾವಾಗ ರೂಪಿಸಲಾಯಿತು; (ಮಾಹಿತಿ ನೀಡುವುದು)	ಹೌದು. ಬೀದರ್ ಜಿಲ್ಲೆಯಲ್ಲಿರುವ ಐತಿಹಾಸಿಕ ನಾಲ್ಕು ಕೋಟೆಗಳಾದ (1) ಭಾಲ್ಕಿ ಕೋಟೆ (2) ಬಸವ ಕಲ್ಯಾಣ ಕೋಟೆ (3) ಭಾತಂಬ್ರ ಕೋಟೆ (4) ಬೀದರ್ ಕೋಟೆ ಇವುಗಳನ್ನು ರೂ. 800.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ದಿನಾಂಕ:30.03.2017 ರಂದು ಸರ್ಕಾರವು ತಾತ್ವಿಕ ಅನುಮೋದನೆ ಹೊರಡಿಸಲಾಗಿದೆ. ಈ ಬಗ್ಗೆ ತಯಾರಿಸಿರುವ ಅಂದಾಜು ಪಟ್ಟಿಗಳನ್ನು ಪರಿಶೀಲಿಸಲಾಗುತ್ತಿದೆ ಹಾಗೂ ಸ್ಥಳ ಪರಿಶೀಲನೆ ಮಾಡಿ ಮುಂದಿನ ಅಗತ್ಯ ಕ್ರಮ ವಹಿಸಲಾಗುವುದು ಈವರೆಗೂ ಅನುದಾನ ಬಿಡುಗಡೆ ಮಾಡಿರುವುದಿಲ್ಲ.
ಆ)	ಈ ಯೋಜನೆಯು ಎಷ್ಟು ಮೊತ್ತದಲ್ಲಿ ರೂಪುಗೊಂಡಿದೆ; ಇದಕ್ಕೆ ಈವರೆಗೆ ಎಷ್ಟು ಮೊತ್ತ ಬಿಡುಗಡೆಗೊಳಿಸಲಾಗಿದೆ;	
ಇ)	ಈ ಯೋಜನೆಯಡಿ ಈವರೆಗೆ ಕೈಗೆತ್ತಿಕೊಂಡಿರುವ ಕಾಮಗಾರಿಗಳಾವುವು; (ಸಂಪೂರ್ಣ ವಿವರ ನೀಡುವುದು)	
ಈ)	ಈ ಐತಿಹಾಸಿಕ ಕೋಟೆಗಳ ಮಹತ್ವ ಹಾಗೂ ಮಾಹಿತಿಯನ್ನು ರಾಜ್ಯದ ಹಾಗೂ ಹೊರ ರಾಜ್ಯದ ಸಾರ್ವಜನಿಕರಿಗೆ ತಲುಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಪ್ರಮುಖವಾಗಿ ಬೀದರ್ ಕೋಟೆ ಕುರಿತಂತೆ ಮಡಿಕೆಗಳನ್ನು ಮುದ್ರಿಸಿ ಪ್ರವಾಸಿಗರಿಗೆ ವಿತರಿಸಲಾಗುತ್ತದೆ. ಇಲಾಖೆಯು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಜರುಗುವ ಪ್ರವಾಸಿ ಮೇಳಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ರಾಜ್ಯದ ಎಲ್ಲಾ ಪ್ರವಾಸಿ ತಾಣಗಳ ಬಗ್ಗೆ ಪ್ರಚಾರ ನೀಡಲಾಗುತ್ತಿದೆ.
ಉ)	ಈ ಐತಿಹಾಸಿಕ ಕೋಟೆಗಳ ಐತಿಹ್ಯ ಹಾಗೂ ಸ್ವಚ್ಛತೆಯನ್ನು ಕಾಪಾಡಲು ಈವರೆಗೆ ರೂಪಿಸಲಾಗಿರುವ ಕ್ರಮಗಳೇನು; ಇದಕ್ಕಾಗಿ ಕಳೆದ 10 ವರ್ಷಗಳಲ್ಲಿ ಯಾವ ಉದ್ದೇಶಕ್ಕಾಗಿ ಹಣ ಖರ್ಚಾಗಿದೆ? (ಹಣದ ಲೆಕ್ಕಶೀರ್ಷಿಕೆಗಳೊಂದಿಗೆ ಸಂಪೂರ್ಣ ವಿವರ ನೀಡುವುದು)	ಬೀದರ್ ಕೋಟೆಯ ಸಂರಕ್ಷಣೆ ಹಾಗೂ ಅಲ್ಲಿ ಸ್ವಚ್ಛತೆ ಕಾಪಾಡುವ ವಿಷಯ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಸ್ವಚ್ಛತೆ ಕಾಪಾಡುವುದು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೂ ಬರುತ್ತದೆ. ಹೀಗಾಗಿ ಅನುದಾನವನ್ನು ಪ್ರವಾಸೋದ್ಯಮ ಇಲಾಖೆಯಿಂದ ವೆಚ್ಚ ಮಾಡಿರುವುದಿಲ್ಲ.

ಸಂಖ್ಯೆ: ಪ್ರಇ 34 ಪ್ರವಾವಿ 2018.

(ಪ್ರಿಯಾಂಕ್ ಖರ್ಗೆ)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ಪ್ರವಾಸೋದ್ಯಮ ಸಚಿವರು